ದಿನಾಂಕಃ 12.02.2026

ಅಸಲುದಾವಃ 29/2024

ಪಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಕರಾರು ಪತ್ರ ಮಾಡಿಸಿಕೊಂಡ ಸಮಯದಲ್ಲಿ ಆರ್.ಟಿ.ಸಿಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿದ್ದೇನೆ ಎಂದು ಉತ್ತರಿಸುತ್ತಾರೆ. ಸದರಿ ದಾವ ಸ್ವತ್ತಿನ ಆರ್.ಟಿ.ಸಿಯಲ್ಲಿ 1 ನೇ ಪ್ರತಿವಾದಿ ಜಯಶೀಲಮ್ಮ ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತ, ಒಳಗೆರೆಹಳ್ಳಿ ರವರಿಗೆಅಡಮಾನ ಮಾಡಿ ಸಾಲವನ್ನು ಪಡೆದುಕೊಂಡಿದ್ದಾರೆ ಎಂದು ನಮೂದಿದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಆ ರೀತಿ ಆರ್.ಟಿ.ಸಿಯಲ್ಲಿ ನಮೂದಾಗಿರುವುದನ್ನು ರದ್ದು ಪಡಿಸಿ ಕರಾರು ಮಾಡಿಕೊಡಿ ಎಂದು ನೀವೇನಾದರು ಕೇಳಿದ್ದೀರಾ ಎಂದರೆ ಸಾಕ್ಷಿ ಇಲ್ಲ, ಎಲ್ಲವನ್ನೂ ಅವರೇ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಕರಾರು ಪತ್ರದಲ್ಲಿ ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತ, ಒಳಗೆರೆಹಳ್ಳಿಯಲ್ಲಿ ಸಾಲದ ಬಾಬ್ತು ಆದಾರವಾಗಿರುವ ಬಗ್ಗೆ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ, ಪತ್ರವನ್ನು 2 ನೇ ಪ್ರತಿವಾದಿ ನಟರಾಜು ಅವರೇ ಮಾಡಿಸಿರುವುದು ಎಂದು ಉತ್ತರಿಸುತ್ತಾರೆ. ಸಾಮಾನ್ಯವಾಗಿ ಒಂದು ಸ್ವತ್ತನ್ನು ಹಿಂದೆ ಯಾರಿಗಾದರು ಅಡಮಾನ, ಕರಾರು ಮಾಡಿಕೊಟ್ಟಿದ್ದರೆ ಅದನ್ನು ರದ್ದು ಪಡಿಸಿ ಇನ್ನೊಬ್ಬರಿಗೆ ಕರಾರು ಮಾಡಿಕೊಡಬೇಕು ಅಲ್ಲವೇ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಒಂದು ವೇಳೆ ನೀವು ದಾವ ಸ್ವತ್ತನ್ನು ಕ್ರಯಕ್ಕೆ ತೆಗೆದುಕೊಳ್ಳಲು ಕರಾರು ಮಾಡಿಕೊಂಡಿದ್ದಲ್ಲಿ ಸದರಿ ಸ್ವತ್ತಿನ ಹಿಂದಿನ ಅಡಮಾನವನ್ನು ರದ್ದು ಪಡಿಸಿ ಬರೆಸಿಕೊಳ್ಳುದ್ದಿರಿ, ಆದರೆ ನೀವು 9 ಲಕ್ಷಗಳ ಭದ್ರತೆಗಾಗಿ ನೀವು ಕರಾರು ಮಾಡಿಸಿಕೊಂಡಿರುವುದರಿಂದ ನೀವು ರದ್ದು ಪಡಿಸಿಕೊಂಡಿಲ್ಲ ಎಂದರೆ ಸಾಕ್ಷಿ ಇಲ್ಲ, ಕೆಲವು ತೊಡಕುಗಳಿವೆ ಅವುಗಳನ್ನು ಸರಿಪಡಿಸಿ ಬಾಕಿ ರೂ.1 ಲಕ್ಷವನ್ನು ಪಡೆದು 10 ತಿಂಗಳ ಒಳಗೆ ಕ್ರಯ ಪತ್ರ ನೊಂದಣಿ ಮಾಡಿಕೊಡುತ್ತೇವೆ ಎಂದು ಅವರು ಹೇಳಿದ್ದರು ಎಂದು ಉತ್ತರಿಸುತ್ತಾರೆ. ನೀವು ಮೇಲಿನ ರೀತಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ದಾವ ಸ್ವತ್ತು ಅದೇ ದಿನ ಕ್ರಯ ನೊಂದಣಿ ಮಾಡಿಕೊಳ್ಳಬಹುದಾಗ ಸ್ವತ್ತು 11–ಇ ನಕ್ಷೆಯ ಅವಶ್ಯಕತೆಯ ಇರುವುದಿಲ್ಲ ಎಂದರೆ ಸಾಕ್ಷಿ ಅವರೇ ಆ ರೀತಿ ಹೇಳಿದರು ಎಂದು ಉತ್ತರಿಸುತ್ತಾರೆ. ದಾವ ಸ್ವತ್ತು ಅದೇ ದಿನ ಕ್ರಯಕ್ಕೆ ನೊಂದಣಿ ಮಾಡಿಸಿಕೊಳ್ಳಬಹುದಾದ ಸ್ವತ್ತಾಗಿರುವುದರಿಂದ ಅದೇ ದಿನ ನೀವು ಶುದ್ಧ ಕ್ರಯ ಪತ್ರ ಬರೆಸಿಕೊಳ್ಳುತ್ತಿದ್ದೀರಿ ಆದರೆ 9 ಲಕ್ಷಗಳ ಭದ್ರತೆಗಾಗಿ ಕರಾರು ಮಾಡಿಸಿಕೊಂಡಿರುವುದರಿಂದ 10 ತಿಂಗಳ ಅವದಿಯನ್ನು ಕರಾರಿನಲ್ಲಿ ನಮೂದು ಮಾಡಿಸಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

2. 2 ನೇ ಪ್ರತಿವಾದಿಗೆ ತುರ್ತು ರೂ.9 ಲಕ್ಷದ ಹಣದ ಅವಶ್ಯಕತೆ ಇದ್ದುದ್ದರಿಂದ ಅವರು ನಿಮ್ಮ ಯಜಮಾನರ ಸ್ನೇಹಿತರಾದ ಮಹೇಶ್ ಅವರ ಮುಖಾಂತರ ನಿಮ್ಮ ಯಜಮಾನರ ಬಳಿ ಬಂದು 9 ಲಕ್ಷಗಳನ್ನು ಶೇಕಡ 1 ರಷ್ಟು ಬಡ್ಡಿ ಕೊಡುವುದಾಗಿ ಹೇಳಿ ಸಾಲ ಕೊಡುವಂತೆ ಕೋರಿಕೊಂಡರು ಎಂದರೆ ಸಾಕ್ಷಿ ಇಲ್ಲ, ಇದು ನಾನು ಮತ್ತು ನನ್ನ ತಂದೆ ಸೇರಿ ಮಾಡಿರುವ ವ್ಯವಹಾರ ಎಂದು ಉತ್ತರಿಸುತ್ತಾರೆ. ಆಗ ನಿಮ್ಮ ಯಜಮಾನರು ಸದರಿ ಸಾಲದ ಹಣದ ಭದ್ರತೆಗಾಗಿ 2 ನೇ ಪ್ರತಿವಾದಿಗೆ ಸೇರಿದ 5 ಖಾಲಿ ಸಹಿ ಮಾಡಿದ ಚೆಕ್ ಗಳು ಮತ್ತು 3 ಸಹಿ ಮಾಡಿದ ಪ್ರೋನೋಟ್ ಅನ್ನು ಬರೆದು ಕೊಟ್ಟರೆ ಸಾಲ ಕೊಡುವುದಾಗಿ ಷರತ್ತು ವಿಧಿಸಿದ್ದರು ಎಂದರೆ ಸಾಕ್ಷಿ ಸುಳ್ಳು ನಾವು ಆ ರೀತಿ ಯಾವುದೇ ಷರತ್ತು ವಿಧಿಸಿಲ್ಲ ಎಂದು ಉತ್ತರಿಸುತ್ತಾರೆ. ಹಾಗೆಯೇ 1 ನೇ ಪ್ರತಿವಾದಿ ಜಯಶೀಲಮ್ಮನವರಿಗೆ ಸೇರಿದ 5 ಖಾಲಿ ಸಹಿ ಮಾಡಿದ ಚೆಕ್ ಗಳು ಮತ್ತು 3 ಸಹಿ ಮಾಡಿದ ಪ್ರೋನೋಟ್ ಅನ್ನು ಬರೆದು ಕೊಡಬೇಕು ಎಂದೂ ಸಹ ಹೇಳಿದ್ದರು ಎಂದರೆ ಸಾಕ್ಷಿ ನಮ್ಮ ಹತ್ತಿರ ಆ ರೀತಿ ಏನೂ ಹೇಳಿಲ್ಲ ಎಂದು ಉತ್ತರಿಸುತ್ತಾರೆ. ನಂತರ ನೀವು ಕಾವೇರಿ ಗ್ರಾಮೀಣಾ ಬ್ಯಾಂಕ್ ಮದ್ದೂರು ಶಾಖೆ ಚೆಕ್ ನಂ.578501 ರೂ.3 ಲಕ್ಷ, 578502 ರೂ.3 ಲಕ್ಷ, 578503 ರೂ.3 ಲಕ್ಷ ಒಟ್ಟಾರೆ ರೂ.9 ಲಕ್ಷಗಳನ್ನು ಮಹೇಶ್ ಬಿನ್ ಬೋರೇಗೌಡ ರವರ ಸಮಕ್ಷಮದಲ್ಲಿ 2 ನೇ ಪ್ರತಿವಾದಿಗೆ ನೀಡಿರುತ್ತೀರಿ ಎಂದರೆ ಸಾಕ್ಷಿ ಹೌದು ಒಡವೇ ಅಡವಿಟ್ಟು ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ಅದೇ ದಿನ ನೀವು 1 ನೇ ಪ್ರತಿವಾದಿಗೆ ಸೇರಿದ ಎಂ.ಡಿ.ಸಿ.ಸಿ ಬ್ಯಾಂಕ್ ಮದ್ದೂರು ಶಾಖೆಗೆ ಸೇರಿದ ಚೆಕ್ ನಂ.703619, 703620,703621,703622,703623 ಖಾಲಿ ಸಹಿ ಮಾಡಿದ ಚೆಕ್ ಗಳನ್ನು ಹಾಗು 5 ಖಾಲಿ ಸಹಿ ಇರುವ ಪ್ರೋನೋಟ್ ಗಳನ್ನು ಮತ್ತು 2 ನೇ ಪ್ರತಿವಾದಿಗೆ ಸೇರಿದ 5 ಖಾಲಿ ಸಹಿಯುಳ್ಳ ಚೆಕ್ ಗಳು ಮತ್ತು 3 ಸಹಿಯುಳ್ಳ ಪ್ರೋನೋಟ್ ಗಳನ್ನು ಭದ್ರತೆಗಾಗಿ ಪಡೆದುಕೊಂಡಿದಿದೀರಿ ಎಂದರೆ ಸಾಕ್ಷಿ ಸಳ್ಳು ಎಂದು ಉತ್ತರಿಸುತ್ತಾರೆ. ಆ ನಂತರ ನೀವು ದಿ.19.04.2021 ರಂದು ಕ್ರಯದ ಕರಾರು ಮಾಡಿಸಿಕೊಂಡಿದ್ದೀರಿ ಎಂದರೆ ಸಾಕ್ಷಿ ರೂ.10 ಲಕ್ಷ ಕ್ಯಾಶ್ ಮೂಲಕ ಕೊಟ್ಟು, ಚೆಕ್ ಮೂಲಕ ರೂ.9 ಲಕ್ಷ ಕೊಟ್ಟು ಕರಾರು ಮಾಡಿಸಿಕೊಂಡಿದ್ದೇವೆ ಎಂದು ಉತ್ತರಿಸುತ್ತಾರೆ. ನೀವು ರೂ.10 ಲಕ್ಷಗಳನ್ನು ಕ್ಯಾಶ್ ಮೂಲಕ ಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೀರಿ, ನೀವು ಚೆಕ್ ಮೂಲಕ ರೂ.9 ಲಕ್ಷಗಳನ್ನು ಮಾತ್ರ ಕೊಟ್ಟಿರುವುದು ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನೀವು ಹೇಳುವ ರೂ.10 ಲಕ್ಷಗಳನ್ನು ಡಿ.ಡಿ., ಚೆಕ್ ಅಥವಾ ಆರ್.ಟಿ.ಜಿ.ಎಸ್ ಮೂಲಕ ಕೊಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನಮ್ಮ ಬಳಿ ಕ್ಯಾಶ್ ಇತ್ತು ಎಂದು ಉತ್ತರಿಸುತ್ತಾರೆ. ಕ್ಯಾಶ್ ಅನ್ನು ಸಬ್ ರಿಜಿಸ್ಟರ್ ಕಛೇರಿಯಲ್ಲಿಯೇ ಪತ್ರ ಆದ ನಂತರ ಕೊಟ್ಟಿದ್ದೇನೆ. ರೂ.10 ಲಕ್ಷಗಳ ನಗದು ಹಣವನ್ನು ಸಬ್ ರಿಜಿಸ್ಟರ್ ಅವರ ಸಮಕ್ಷಮ ಕೊಟ್ಟಿದ್ದೇವೆ ಎಂದು ಕರಾರಿನಲ್ಲಿ ನಮೂದಿದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಸಾಮಾನ್ಯವಾಗಿ ಸಬ್ ರಿಜಿಸ್ಟರ್ ಕಛೇರಿಯಲ್ಲಿ ಯಾವುದೇ ಹಣವನ್ನು ಚೆಕ್, ಡಿ.ಡಿ ಮತ್ತು ಆರ್.ಟಿ.ಜಿ.ಎಸ್ ಮೂಲಕ ತೆಗೆದುಕೊಳ್ಳುತ್ತಾರೆ

ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನೀವು 9 ಲಕ್ಷಗಳನ್ನು ಮಾತ್ರ ಚೆಕ್ ಮೂಲಕ ಕೊಟ್ಟಿದ್ದೀರಿ ರೂ.10 ಲಕ್ಷ ನಗದಾಗಿ ಕೊಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ, ರೂ.10 ಲಕ್ಷ ನಮ್ಮ ಉಳಿತಾಯ ಇತ್ತು, ನಾನು ಮತ್ತು ನಮ್ಮ ತಂದೆ ಸೇರಿ ಕೊಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ನೀವು ಒಡವೆಗಳನ್ನು ಅಡವಿಟ್ಟು ಹಣ ಕೊಟ್ಟಿರುವುದಾಗಿ ಹೇಳುತ್ತಿದ್ದೀರಿ ನಿಮಗೆ ಯಾವುದೇ ಆದಾಯದ ಮೂಲ ಇರಲಿಲ್ಲ ಹಾಗಾಗಿ ರೂ.10 ಲಕ್ಷಗಳನ್ನು ನಗದಾಗಿ ಕೊಡುವ ಸಾಮಾರ್ಥ್ಯವೂ ನಿಮಗೆ ಇರಲಿಲ್ಲ ಎಂದರೆ ಸಾಕ್ಷಿ ನನ್ನ ಯಜಮಾನರು ನನಗೆ ಪ್ರತಿ ತಿಂಗಳು ನನಗೆ ರೂ.50000/- ಖರ್ಚಿಗೆ ಕೊಡುತ್ತಾರೆ, ಅದರಲ್ಲಿ ಉಳಿತಾಯ ಮಾಡಿರುತ್ತೇನೆ, ಜೊತೆಗೆ ನನ್ನ ತಂದೆ ನನಗೆ ಅರಿಶಿಣ ಕುಂಕುಮ್ಮಕ್ಕಾಗಿ ನನಗೆ ಹಣ ಕೊಟ್ಟಿದ್ದರು ಹಾಗಾಗಿ ಅದೆಲ್ಲವನ್ನು ಸೇರಿಸಿ ನನಗೆ ಕೃಷಿ ಭೂಮಿ ಖರೀದಿಸುವ ಆಸೆ ಇದ್ದುದ್ದರಿಂದ ಕರಾರು ಮಾಡಿಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ಈ ಮೇಲೆ ಹೇಳಿದ ರೀತಿ ನನ್ನ ತಂದೆ ನನಗೆ ಅರಿಶಿಣ ಕುಂಕುಮ್ಮಕ್ಕಾಗಿ ನನಗೆ ಹಣ ಕೊಟ್ಟಿದ್ದರು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದಾದರು ದಾಖಲಾತಿಯನ್ನು ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ, ಬೇಕೆಂದರೆ ಹಾಜರು ಮಾಡುತ್ತೇನೆ ಎಂದು ಉತ್ತರಿಸುತ್ತಾರೆ. ನಿಮಗೆ ಆದಾಯದ ಮೂಲವೇ ಇಲ್ಲ, ಅಧಿಕ ಬಡ್ಡಿ ಪಡೆಯುವ ಆಸೆಯಿಂದ ನಿಮ್ಮ ಒಡವೆಗಳನ್ನು ಅಡವಿಟ್ಟು ರೂ.9 ಲಕ್ಷಗಳನ್ನು ಪ್ರತಿವಾದಿಗೆ ಸಾಲವಾಗಿ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಕರಾರು ಪತ್ರದಲ್ಲಿ ಸಾಕ್ಷಿಯಾಗಿ ಮಹೇಶ್ ಅವರು ಸಹಿ ಮಾಡಿಲ್ಲ ಬದಲಾಗಿ ನಿಮ್ಮ ತಂದೆ ಕೃಷ್ಣಪ್ಪ ಮತ್ತು ನಿಮ್ಮ ಯಜಮಾನರ ಸ್ನೇಹಿತ ಪ್ರದೀಪ ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿ ಹೌದು ಮಹೇಶ್ ಅವರು ಹುಷಾರಿಲ್ಲವೆಂದು ಆ ದಿನ ಬರಲಿಲ್ಲ ಎಂದು ಉತ್ತರಿಸುತ್ತಾರೆ. ಮಹೇಶ್ ಅವರು ಕರಾರು ಪತ್ರದಲ್ಲಿ ಸಹಿ ಮಾಡಿಲ್ಲದೇ ಇರುವುದನ್ನು ಹಾಗು ನಿಮ್ಮ ತಂದೆ ಮತ್ತು ನಿಮ್ಮ ಯಜಮಾನರ ಸ್ನೇಹಿತ ಪ್ರದೀಪ್ ಸಾಕ್ಷಿ ಸಹಿ ಮಾಡಿರುವುದನ್ನು ದುರುಪಯೋಗ ಪಡಿಸಿಕೊಂಡು ಮತ್ತು ಶರೀಕು ಮಾಡಿಕೊಂಡು ಸಾಲದ ಭದ್ರತೆಗಾಗಿ ಬರೆದುಕೊಟ್ಟಿದ್ದ ಪತ್ರವನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ದಾವೆ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

3. ಕರಾರು ಸಮಯದಲ್ಲಿ ನೀವು 1 ಮತ್ತು 2 ನೇ ಪ್ರತಿವಾದಿಗಳಿಂದ ಪರೆದುಕೊಂಡಿದ್ದ ಖಾಲಿ ಸಹಿ ಮಾಡಿದ್ದ ಚೆಕ್ ಗಳು ಮತ್ತು ಪ್ರೋನೋಟ್ಗಳನ್ನು ರೂ.9 ಲಕ್ಷ ಹಣ ತೀರುವಳಿ ಮಾಡಿದ ಬಳಿಕ ವಾಪಸ್ಸು ಕೊಡುವುದಾಗಿ ಒಪ್ಪಿಕೊಂಡಿದ್ದಿರಿ ಎಂದರೆ ಸಾಕ್ಷಿ ಇಲ್ಲ ಆ ರೀತಿ ಯಾವುದೇ ಚೆಕ್ ಗಳನ್ನು ಮತ್ತು ಪ್ರೋನೋಟ್ ಗಳನ್ನು ನಾವು ಪಡೆದುಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ಕರಾರು ಪತ್ರ ತಯಾರು ಮಾಡಿಸುವ ಸಮಯದಲ್ಲಿ 2 ನೇ ಪ್ರತಿವಾದಿ ಪತ್ರದಲ್ಲಿ ಸಾಲವಾಗಿ ಪಡೆಯುತ್ತಿರುವ ರೂ.9 ಲಕ್ಷಗಳನ್ನು ಮಾತ್ರ ನಮೂದಿಸಿ ಎಂದು ಕೋರಿಕೊಂಡರು ನಿಮ್ಮ ಯಜಮಾನರು ಇಲ್ಲ, ನಾವು ಸಾಲವಾಗಿ ಕೊಟ್ಟ ದುಪ್ಪಟ್ಟು ಹಣವನ್ನೆ

ಪತ್ರದಲ್ಲಿ ಬರೆಸುವುದು ಎಂದು ಹೇಳಿ ಷರತ್ತು ವಿಧಿಸಿದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿ ಪಡೆದುಕೊಂಡ ರೂ.9 ಲಕ್ಷಗಳನ್ನು ನವೆಂಬರ್ 2022 ರವರೆಗು ಶೇಕಡ 1 ರಂತೆ ನಿಮಗೆ ಪೋನ್ ಪೇ ಮತ್ತು ನಗದು ರೂಪದಲ್ಲಿ ಪಾವತಿ ಮಾಡುತ್ತಾ ಬಂದಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. 2 ನೇ ಪ್ರತಿವಾದಿ ಕೊನೆಯ ಬಾರಿ 27.06.2022 ರಂದು ನಿಮ್ಮ ಅಕೌಂಟಿಗೆ ರೂ.23000/-ಗಳನ್ನು ಪೋನ್ ಪೇ ಮಾಡಿದ್ದಾರೆ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಖಾತೆಯ 2022 ರವರೆಗಿನ Statement of accounts ಅನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ತೊಂದರೆ ಏನೂ ಇಲ್ಲ ಎಂದು ಉತ್ತರಿಸುತ್ತಾರೆ.

**ವಿನಂತಿಯ ಮೇರೆಗೆ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.